ಬರಿಮೈಲೆ ಕೂತು ಉಲ್ಲಾಸದಾಗ ಇದ್ರು. ಎಲ್ಲಿಗೋ ಹೋಗಿದ್ದ ಶಾಕಯ್ಯ ಇನ್ನು ಬಂದಿರಲಿಲ್ಲ. ಶಾಕಯ್ಯ ಬರತಿಗೆ ಎಲ್ಲಾ ಮುಗಿಸಿಕೊಂಡು ಬಿಡಬೇಕಂತ ಮತ್ತೆ ಬಡಬಡ ಮನಿಗೆ ಬಂದ.

ರಾಗಪ್ಪ ಆಗಲೇ ಹೊಟ್ಟೆ ಉಬ್ಬಿಸಿಕೊಂಡು ನಿದ್ದಿಗೆ ಬಿದ್ದಿದ್ದ. ಪಿಂಜಿ ಆಗಲೇ ಒಂದು ಮೂಲಿಗೆ ಮಾವಗ ಕಾಣಲಾರದಂಗ ಹಾಸಿ ಹೊಗೆ ತುಂಬಿದ ಮನ್ಯಾಗ ದೇವ್ರುಗಳಾದ ಯಲ್ಲಮ್ಮ, ಕಂಠೆಮ್ಮ, ಹುಲಿಗೆಮ್ಮ, ಪಾರ್ವತಿ, ಪರಮೇಶ್ವರ, ಅಂಜಿನೇಯ, ರಾಘವೇಂದ್ರ ಸ್ವಾಮಿನ ನೋಡಿದವಳು 'ಈ ದೇವ್ರಪೋಟ ನೋಡಿನೋಡಿ ಸಾಕಾಗೋತು... ಈ ಮನೆಂಬದು ಬಿದ್ದು ದಂಡಿ ಹರಕೊಂಡು ಹೋಗ್ಲಿ...' ಅಂತ ಮಲಿಗಿದ್ಲು. ಶೇಕ್ರ ಮೆಲ್ಲಕ ಬಂದವನು ಲೈಟ್ ಪಳಕ್ಕನ ಆಫ್‌ಮಾಡಿ ಪಿಂಜಿ ಬಗಲ ಉಳ್ಳಿದ. ಅಷ್ಟತ್ತಿಗೆ ಪಿಂಜಿ ಕುದಿಗೆ ಮೈಯೆಲ್ಲ ಬೆವ್ತು ತಣ್ಣಗಾಗಿದ್ಲು. ಹೆಂಗಾರ ಆಗ್ಲೆಂತ ಅಲ್ಲಿಗೆ ಕೈ ಹಾಕಿದ. ಒಮ್ಮಿಗೆ ಸಸಿ ಸೂಡಿಗೆ ಕೈ ಹಾಕಿದಂಗ ಆತು. ಒಮ್ಮಿಗೆ ಎದ್ದು ಕೂತವನು ಹೊರ್ಗ ಬಂದ. ಹೊರಗ ನೋಡಿದ್ರ ತಣ್ಣನ ಗಾಳಿ ಉಗ್ಗುತಿತ್ತು. ತಣ್ಣಗ ಮಲಿಗಿದ ರಾಗಪ್ಪ ಮಂಚದ ಮೇಲೆ ಗೊರ್‌ಗೊರ್ ನಿದ್ದಿ ಹೊಡಿತಿದ್ದ. ಶೇಕ್ರ ಒಮ್ಮಿಗೆ ಸಿಟ್ಟು ತಲಿಗೇರಿಸಿಕೊಂಡು ಅಪ್ಪನಂಬೋ ತುಡುಗ್ ಸೂಳೆಮಗನ ಕುತಿಗಿ ಇಸಿಗಿ ಕೊಲ್ಲಿ ಬಿಡಬೇಕಂತ ತಲಿದಿಂಬಿಗೆ ನಿಂತ. ಯಾಕೋ ಬೇಡನಿಸಿ ಮನಿ ಮುಂದಿದ್ದ ಬಚ್ಚಲ ನೋಡಿದ. ಬಚ್ಚಲದಾಗಿದ್ದ ಐದಾರು ಕಪ್ಪಿ ಕೊರ್‌ಗುಡುತಿದ್ವು. ಕಪ್ಪಿ ಒದ್ರಾಡದು ಕೇಳಿಸಿಕೊಳ್ಳಲಾರದ ದೂರದಿಂದ ಕಲ್ಲು ತಗಂದು ರಪ್ಪನ ಬಚ್ಚಲದಾಕ ಒಗದ. ಕಪ್ಪಿಗಳು ಒಮ್ಮಿಗೆ ಗಪ್ಪನಾದ್ವು. ಮೆಲ್ಲಕ ಬಚ್ಚಲದಾಕ ಹೋದ. ಒಂದೆರೆಡು ಗೌಡ್ರು ಕಪ್ಪಿ ಅಂತಾವು ಕರಿ ಬಂಡೆಮೇಲೆ ಕೂತಿದ್ವು. ಒಂದು ಗೌಡ್ರುಕಪ್ಪಿ ತಗಂದು ಮಂಚಕ ಬಂದು ನಿಂತ. ರಾಗಪ್ಪ ಹೊಟ್ಟೆ ಉಬ್ಬಿಉಬ್ಬಿಸಿ ನಿದ್ದಿ ಹೊಡಿತಿದ್ದನ್ನ ನೋಡಿ ತಡಕೊಳ್ಳಕಾಗಲಿಲ್ಲ. ಸೀದಾ ನಡಹೊಟ್ಟೆಗೆ ಕೈ ಸತುಮಾಡಿ ಒಗದ. ಕಪ್ಪಿ ರಾಗಪ್ಪನ ಹೊಟ್ಟಗಿ ಪುಟುದು ಕಾಲು ಅಗಲಮಾಡಿಕೊಂಡು ನೆಲಕ ಬೆಳ್ಳಗ ಬಿತ್ತು. ಕಪ್ಪಿ ಸತ್ತು ಹೋಗಿರಬೇಕು. ರಾಗಪ್ಪ ಎಚ್ಚರಾಗಲಿಲ್ಲ. ಪಿಂಜಿನೂ ಹೊರಗ ಏನಾ ಸಪ್ಪಳ ಆಯ್ತೆಂದು ಹೊರಗ ಬಂದು ನೋಡಲಿಲ್ಲ. ಅದೇ ಕುದ್ಯಾಗ ಮೈಯೆಲ್ಲಾ ಇನ್ನಾ ನೀರ್‌ನೀರ್

